

ಕನ್ನಡ ಮಾತ್ರವಲ್ಲ, ದೇಶದಲ್ಲೇ ಅಪರೂಪ ಈ 'ಕಿರಗೂರಿನ ಗಯ್ಯಾಳಿಗಳು'

'ಸುಧಾರಿಸಿದೆ', ಆದರೆ ಸಂಪೂರ್ಣವಾಗಿ ಅಲ್ಲ'' ಎಂದು ಹೇಳುತ್ತಾರೆ ನಿರ್ದೇಶಕಿ ಸುಮನ್ ಕಿತ್ತೂರು. 'ಕಿರಗೂರಿನ ಗಯ್ಯಾಳಿಗಳು' ಸಿನಿಮಾ ನಂತರ, 'ನಾತಿಚರಾಮಿ', 'ವೇದ' ಸಿನಿಮಾಗಳಲ್ಲಿ ಹೆಣ್ಣುಮಕ್ಕಳು ವಿಜೃಂಭಿಸಿರುವ ಕೆಲ ಉದಾಹರಣೆಗಳನ್ನು ನೀಡುವ ಅವರು, ''ಇತ್ತೀಚೆಗೆ ಬಂದ ಪ್ಯಾರಲಲ್ ಸಿನಿಮಾಗಳು, ವೆಬ್ ಸಿರೀಸ್‌ಗಳಲ್ಲಿ ಹೆಣ್ಣುಮಕ್ಕಳಿಗೆ ಒಳ್ಳೊಳ್ಳೆ ಪಾತ್ರಗಳು ಸಿಗುತ್ತಿವೆ. ಒಂದು ಹಾಡಿಗೆ, ಡೈಲಾಗ್‌ಗೆ ಸೀಮಿತರಾಗುವುದು ಬಿಟ್ಟು, ಆಗಿನ ಕಾಲದಲ್ಲಿ ಏನು ಮಾಡಿದ್ದಾರೋ ಅದನ್ನು ಮಾಡುವುದು ಬಿಟ್ಟು ಬೇರೆ ರೀತಿ ಕಾಣಿಸಿಕೊಳ್ಳುವ ಹಂಬಲವೂ ಹೆಣ್ಣುಮಕ್ಕಳಲ್ಲಿ ಗಟ್ಟಿಯಾಗಿದೆ. ಹೆಣ್ಣುಮಕ್ಕಳನ್ನೇ ಇಟ್ಟುಕೊಂಡು ಸಾಕಷ್ಟು ಕಥೆಗಳು ಬರುತ್ತಿವೆ. ಮತ್ತೊಂದೆಡೆ, ಸೂಪರ್ ಸ್ಟಾರ್ ಸಿನಿಮಾಗಳಲ್ಲಿ ಡಾನ್ಸ್ ಮತ್ತು ಕೆಲವು ದೃಶ್ಯಗಳಲ್ಲಿ ಮಾತ್ರ ನಾಯಕಿಯರು ಬಂದುಹೋಗುವುದು ಒಂದು ಸಂಪ್ರದಾಯದಂತೆ ನಡೆಯುತ್ತಿದೆ. ಆದರೆ ಕೆಲವೊಮ್ಮೆ ಈ ರೂಢಿಯನ್ನೂ ಮೀರಿ, ಬದಲಾವಣೆಗಳು ನಡೆಯುತ್ತಿವೆ. ಒಬ್ಬ ಸೂಪರ್ ಸ್ಟಾರ್ ಇಂಥದ್ದೇ ಹೀರೊಯಿನ್ ತನ್ನ ಸಿನಿಮಾಗೆ ಬೇಕು ಎಂದು ಬೇಡಿಕೆ ಇಡುತ್ತಾನೆ ಎಂದರೆ ಆ ಹೆಣ್ಣುಮಗಳು ಸಿನಿಮಾ ಗೆಲ್ಲಿಸುತ್ತಾಳೆ ಎಂಬ ನಂಬಿಕೆಯಿಂದಲೇ ತಾನೆ?'' ಎಂದೂ ಸುಮನ್ ಹೇಳುತ್ತಾರೆ.

''ಈ 'ಸ್ಕ್ರೀನ್ ಸ್ಪೇಸ್' ವಿಚಾರದಲ್ಲಿ ನಮ್ಮ ಹೀರೋಯಿನ್‌ಗಳು ಒಂದಾಗಿ, ನಾವು ಐದು ಹಾಡು, ನಾಲ್ಕು ಸೀನಿಗೆ ಸೀಮಿತವಲ್ಲ ಎಂದು ನಿರ್ಧರಿಸಬೇಕು. ನಮಗೂ ಸರಿಸಮಾನ ಸಂಭಾವನೆ, ಸ್ಕ್ರೀನ್ ಸ್ಪೇಸ್ ಕೊಡಿ ಎಂದು ಕೇಳದೇ ಇದೆಲ್ಲಾ ಸಾಧ್ಯವಾಗದು. ನಾಯಕ ನಟಿಯರು ಕೇಳುವ ತನಕ ಹಾಗೇ ಮುಂದುವರೆಯುತ್ತದೆ'' ಎನ್ನುವ ಸುಮನ್‌ರ ಮಾತನ್ನು ಕನ್ನಡದ ನಟಿಯರು ಗಂಭೀರವಾಗಿ ಯೋಚಿಸಬೇಕು.

## ಪ್ರಯೋಗಗಳಿಗೆ ಬೇಕು ಯಶಸ್ಸಿನ ಟಾನಿಕ್

ಕನ್ನಡ ಸಿನಿಮಾರಂಗದಲ್ಲಿ ಮಹಿಳೆಯರ ವಿಷಯವನ್ನೇ ಪ್ರಧಾನವಾಗಿಟ್ಟುಕೊಂಡ ಸಿನಿಮಾ ಪ್ರಯೋಗಗಳು ನಡೆಯುತ್ತಿವೆ ಎನ್ನುತ್ತಾರೆ ನಿರ್ದೇಶಕ ಹೇಮಂತ ರಾವ್. ''ಇಡೀ ಸಿನಿಮಾರಂಗ ನಡೆಯುವುದೇ ಒಂದು ಸೂತ್ರದಂತೆ. ಯಾವುದು ವ್ಯಾಪಾರ ನಡೆಸಬಲ್ಲದು ಅದನ್ನು ಮಾಡುವುದು ರೂಢಿ. ಒಬ್ಬ ನಾಯಕನಟಿಯ ಚಿತ್ರ ದೊಡ್ಡ ಮಟ್ಟಿಗೆ ಯಶಸ್ಸು ಕಂಡಿದ್ದೇ ಆದರೆ ಆ ರೀತಿ ಸಿನಿಮಾ ಮಾಡಲು ಮತ್ತಷ್ಟು ಜನ ಮುಂದೆ ಬರುತ್ತಾರೆ. ಆದರೆ ಯಾರೂ ದುಡ್ಡು ಕಳೆದುಕೊಳ್ಳಲು ಇಷ್ಟಪಡುವುದಿಲ್ಲ. ಯಾವುದು ಚಾಲನೆಯಲ್ಲಿದೆಯೋ ಅದಕ್ಕೆ ಹೋಗುತ್ತಾರೆಯೇ ವಿನಃ ಸಾಹಸಕ್ಕೆ ಕೈ ಹಾಕುವುದಿಲ್ಲ'' ಎನ್ನುವ ಅವರು, ತಾವು 'ಗೋಧಿ ಬಣ್ಣ ಸಾಧಾರಣ ಮೈಕಟ್ಟು' ಸಿನಿಮಾ ಮಾಡಿದ್ದು ಇಂಥದ್ದೊಂದು ರಿಸ್ಕ್‌ನಿಂದಲೇ ಎನ್ನುತ್ತಾರೆ.

''ಕೊರೊನಾ ನಂತರ ಚಲನಚಿತ್ರರಂಗ ಕೂಡ ದೊಡ್ಡ ಪೆಟ್ಟು ತಿಂದಿದೆ. ಹೀಗಾಗಿ ಪ್ರಯೋಗ ಮಾಡಲು ಹಿಂದೇಟು ಹಾಕುತ್ತಾರೆ. ಯಾವುದು ನಡೆಯುತ್ತಿದೆಯೋ ಅದರ ಹಿಂದೆ ಓಡುವುದು ಸಹಜ. ಆದರೆ ಈ ಮನೋಭಾವ ತಾತ್ಕಾಲಿಕ. ಒಳ್ಳೆ ಪ್ರಯೋಗಗಳು ನಡೆಯುತ್ತಿವೆ'' ಎಂಬ ಆಶಾಭಾವನೆ ಅವರದು.

'ನಿರ್ಮಾಪಕರ ಪಾಲಿಗೆ ಸಿನಿಮಾ ಬದುಕಿನ ಪ್ರಶ್ನೆಯೂ ಆಗಿರುತ್ತದೆ. ಕೋಟ್ಯಂತರ ದುಡ್ಡನ್ನು ಸಿನಿಮಾಗೆ ಹೂಡಿದ ಮೇಲೆ ಅದು ಓಡದೇ ಇದ್ದರೆ ಎಂಬ ಹೆದರಿಕೆ ಇರುತ್ತದೆ. ಇದೇ ಮಹಿಳಾ ಪ್ರಧಾನ ಚಿತ್ರಗಳ ಕೊರತೆಗೆ ಕಾರಣವಿರಬಹುದು. ಆದರೆ ಈಗೀಗ ಕಮರ್ಷಿಯಲ್ ಸ್ಪೇಸ್‌ನಲ್ಲಿ ಹೆಣ್ಣುಮಕ್ಕಳ ಪಾತ್ರಗಳಿಗೆ ಸೂಕ್ಷ್ಮತೆಯ ಬರವಣಿಗೆ ಕಂಡುಬಂದಿದೆ. ಇದು ಮುಂದೆ ಹೆಚ್ಚಾಗಬಹುದು'' ಎನ್ನುವುದು ಹೇಮಂತ್‌ರ ಆಶಾಭಾವನೆ.

ತಮ್ಮ ಸಿನಿಮಾಗಳಲ್ಲಿ ಮಹಿಳಾ ಪಾತ್ರಗಳಿಗೆ ನಾಯಕನಷ್ಟೇ ಸಮಾನ ಅವಕಾಶ, ಪ್ರಾಮುಖ್ಯ ನೀಡಿರುವುದಾಗಿ ಹೇಳುವ ಹೇಮಂತ್, ''ಕನ್ನಡದಲ್ಲಿ ಈಚೆಗಿನ ಮಹಿಳಾಪ್ರಧಾನ ಚಿತ್ರಗಳು ದೊಡ್ಡ ಮಟ್ಟಕ್ಕೆ ಯಶಸ್ಸು ಕಂಡಿದ್ದು ಕಡಿಮೆ. ಒಮ್ಮೆ ಒಂದು ಸಿನಿಮಾ ಯಶಸ್ಸಾದರೆ ನಿಜಕ್ಕೂ ಅಂಥ ಸಾಕಷ್ಟು ಪ್ರಯೋಗಗಳು ಬರುತ್ತವೆ. ದುಡ್ಡು ಹಾಕಿ ರಿಸ್ಕ್ ತೆಗೆದುಕೊಳ್ಳಲು ಸಿದ್ಧವಿದ್ದವರು ಮಾತ್ರ ಇಂಥ ಪ್ರಯೋಗಕ್ಕೆ ಕೈಹಾಕುತ್ತಾರೆ. ಆ ಪ್ರಯೋಗ ಯಶಸ್ವಿಯಾಗಬೇಕಷ್ಟೆ'' ಎನ್ನುತ್ತಾರೆ.

ಶ್ರುತಿ ಅವರಿಂದ ಹಿಡಿದು ಹೇಮಂತ್‌ವರೆಗಿನ ಎಲ್ಲರ ಮಾತುಗಳ ಸಾರಾಂಶ ಇಷ್ಟೆ: ಕನ್ನಡದಲ್ಲಿ ಮಹಿಳಾ ಪ್ರಧಾನ ಸಿನಿಮಾಗಳು ರೂಪುಗೊಳ್ಳುತ್ತಿವೆ. ಆದರೆ, ಅವುಗಳ ಸಂಖ್ಯೆ ಕಡಿಮೆ. ಈ ಸಂಖ್ಯೆ ಸುಧಾರಣೆ ಆಗುವುದು ಹೇಗೆ? ಯಾವಾಗ? ಎನ್ನುವುದರ ಬಗ್ಗೆ ಯಾರಲ್ಲೂ ಸ್ಪಷ್ಟ ಉತ್ತರವಿಲ್ಲ. ಅವಕಾಶಗಳ ಬಗ್ಗೆಯೇ ಅಸ್ಪಷ್ಟತೆ ಹಾಗೂ ಗೊಂದಲವಿರುವಾಗ, ಲಿಂಗಸೂಕ್ಷ್ಮತೆಯಂಥ ವಿಷಯದ ಬಗ್ಗೆ ಕನ್ನಡದ ವ್ಯಾಪಾರಿ ಚಿತ್ರರಂಗ ಮಾತನಾಡಬೇಕೆಂದು ನಿರೀಕ್ಷಿಸುವುದು ಹೇಗೆ ಸಾಧ್ಯ? ■